## ಬುತ್ತಿ ಚಿಗುರು

### ಫೇಲಾದ್ರೂ ಬೈಕ್

ತಂದೆ ತನ್ನ ಮಗನಿಗೆ ಹೇಳಿದ, "ಮಗಾ, ಈ ವರ್ಷ ನೀನು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪಾಸ್ ಆದ್ರೆ ನಿನಗೊಂದು ಹೊಸಾ ಬೈಕ್ ಕೊಡುಸ್ತೇನೆ. ಅದಕ್ಕೆ ಮಗ, "ಅಪ್ಪಾ, ಫೇಲಾದ್ರೆ ಕೊಡಿಸಲ್ವಾ?' ಎಂದು ಪ್ರಶ್ನಿಸಿದ. ಅದಕ್ಕೆ ಅವನ ತಂದೆ ನಗುತ್ತಲೇ, "ಫೇಲಾದ್ರೂ ಕೊಡುಸ್ತೇನೆ ಕಂದಾ" ಎಂದ. ಅಪ್ಪನ ಮಾತು ಕೇಳಿ ಮಗ ಕುಣಿಯುತ್ತಾ ಮನೆಯಿಂದ ಹೊರಗೆ ಓಡಿದ. ಇದನ್ನು ಕೇಳಿಸಿಕೊಂಡ ಅವನ ಹೆಂಡತಿ, "ರೀ, ನಿಮಗೇನು ತಲೆಕೆಟ್ಟಿದೆಯಾ? ಫೇಲಾದ್ರೆ ಯಾಕ್ರೀ ಬೈಕ್ ಕೊಡುಸ್ತೀರಿ ಅವನಿಗೆ?" ಎಂದಳು. ಅದಕ್ಕೆ ಅವಳ ಗಂಡ, "ಪಾಸಾದ್ರೆ ಕಾಲೇಜ್‌ಗೆ ಹೋಗೋಕೆ. ಫೇಲಾದ್ರೆ ನನ್ನ ಹಾಗೆ ಹಾಲು ಮಾರೋಕೆ".

**ಪ.ನಾ. ಹಳ್ಳಿ ಹರೀಶ್‌ಕುಮಾರ್**





### ಹೆಂಡತಿ ಕೊಡುವಷ್ಟೇ ಕೊಡಿ...

ರಮೇಶ ಯಾವಾಗಲೂ ತನ್ನ ಪತ್ನಿ ಸ್ಮಿತಾಳಿಗೆ ಮನೆ ಕೆಲಸದಲ್ಲಿ ಸಹಾಯ ಮಾಡುತ್ತಿದ್ದುದನ್ನು ನೋಡುತ್ತಿದ್ದ ಪಕ್ಕದ ಮನೆಯ ಗೀತಾಗೆ ಅವರ ಬಗ್ಗೆ ಹೊಟ್ಟೆ ಉರಿ. ಒಂದು ದಿನ ಗೀತಾ ತಮ್ಮ ಹಿತ್ತಲಿನಿಂದ ಪಕ್ಕದ ಮನೆ ಕಡೆ ನೋಡಿದಾಗ ರಮೇಶ ಪಾತ್ರೆಗಳನ್ನು ತಿಕ್ಕಿ ತೊಳೆದು ಇಡುತ್ತಿದ್ದರು. ಅವರಿಗೆ ಅವಮಾನ ಮಾಡಲು ಕಾಯುತ್ತಿದ್ದ ಗೀತಾ, 'ಎಷ್ಟು ಚೆನ್ನಾಗಿ ಪಾತ್ರೆ ತೊಳೀತೀರಿ? ನಮ್ಮ ಮನೆಯಲ್ಲೂ ರಾಶಿ ಪಾತ್ರೆ ಬಿದ್ದಿದೆ. ಸ್ವಲ್ಪ ತಿಕ್ಕಿ ಕೊಟ್ಟರೆ ನನಗೂ ಸಹಾಯವಾಗುತ್ತೆ... ನಿಮಗೆ ಏನು ಕೊಡಬೇಕು ಹೇಳಿ ಕೊಡುತ್ತೇನೆ' ಎಂದು ಛೇಡಿಸಿದಳು. ರಮೇಶ ಯಾವ ಸಂಕೋಚವೂ ಇಲ್ಲದೆ, 'ಓ... ಅದಕ್ಕೇನಂತೆ? ಇದು ಮುಗಿದ ಕೂಡಲೇ ನಿಮ್ಮ ಪಾತ್ರೆ ತೊಳೆದು ಕೊಡುವೆ. ನನ್ನ ಹೆಂಡತಿ ಏನು ಕೊಡುತ್ತಾಳೋ ಅದನ್ನೇ ನೀವೂ ಕೊಟ್ಟರೆ ಸಾಕು' ಎಂದ. ಅಲ್ಲಿಂದ ಗೀತಾ ಕಾಲ್ಕಿತ್ತಿದಳು.

**ಜಯಮಾಲಾ ಪೈ**